**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.525/2025**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿತರುಃ

1. ಮಲ್ಲಪ್ಪ ತಂದೆ ನಾರಾಯಣಿ, ವಯಸ್ಸು: 65 ವರ್ಷಗಳು,
   ಉಃ ಒಕ್ಕಲುತನ,

2. ಚಂದ್ರಶೇಖರ ತಂದೆ ಪಂಪಾಪತಿ, ವಯಸ್ಸು: 31 ವರ್ಷಗಳು,
   ಉಃ ಒಕ್ಕಲುತನ,

3. ಅಮರೇಶ ತಂದೆ ಮಲ್ಲಪ್ಪ, ವಯಸ್ಸು: 35 ವರ್ಷಗಳು,
   ಉಃ ಒಕ್ಕಲುತನ,

4. ವೆಂಕಟೇಶ ತಂದೆ ಮಲ್ಲಪ್ಪ, ವಯಸ್ಸು: 24 ವರ್ಷಗಳು,
   ಉಃ ಒಕ್ಕಲುತನ,

5. ಪಂಪಾಪತಿ ತಂದೆ ಮಲ್ಲಪ್ಪ, ವಯಸ್ಸು: 27 ವರ್ಷಗಳು,
   ಉಃ ಒಕ್ಕಲುತನ,

6. ರುಕ್ಮವ್ವ ಗಂಡ ಪಂಪಾಪತಿ, ವಯಸ್ಸುಃ 52 ವರ್ಷ,
   ಉಃ ಕೂಲಿ, ಎಲ್ಲರೂ ಸಾಃ ಪೀರ್ ನಾಯಕ ತಾಂಡಾ,
   ಬಿ.ಗಣೇಕಲ್, ತಾಃ ದೇವದುರ್ಗ, ಜಿಃ ರಾಯಚೂರು.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 29.07.2025 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಜಾಲಹಳ್ಳಿ ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಬಿ.ಗಣೇಕಲ್ ಗ್ರಾಮದ ಸಿಮಾಂತರದ ಮೇನ್ ಕಾಲುವೆ ಹತ್ತಿರ ಸಾಕ್ಷಿ-1 ರವರು ತಮ್ಮ ಮೋಟಾರ್ ಸೈಕಲ್ ಮೇಲೆ ತಮ್ಮ ಹೊಲದಿಂದ ತಮ್ಮ ಮನೆಯ ಕಡೆಗೆ ಹೋಗುತ್ತಿರುವಾಗ 1 ರಿಂದ 6 ನೇ ಆರೋಪಿತರಾದ ನೀವುಗಳು ಅಪರಾಧವೆಸಗುವ ಏಕೋದ್ದೇಶದಿಂದ ಅಕ್ರಮಕೂಟವನ್ನು ರಚಿಸಿಕೊಂಡು ಅದರ ಸದಸ್ಯರಾಗುವ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.189(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 6 ನೇ ಆರೋಪಿತರಾದ ನೀವುಗಳು, ಸದರಿ ಅಕ್ರಮ ಕೂಟದ ಸದಸ್ಯರಾಗಿ ದೊಂಬಿ ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.191(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 6 ನೇ ಆರೋಪಿತರಾದ ನೀವುಗಳು, ಸಾಕ್ಷಿ-1 ರವರಿಗೆ ತಡೆದು ನಿಲ್ಲಿಸಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.126(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಏಕೋದ್ದೇಶದಿಂದ ಮುಂದುವರೆದು, 1, 4 ರಿಂದ 6 ನೇ ಆರೋಪಿತರಾದ ನೀವುಗಳು ಸಾಕ್ಷಿ-1 ರವರಿಗೆ ಕೈಯಿಂದ ಹೊಡೆದು ಮೂಕ ಪೆಟ್ಟು ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.115(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವುಗಳು ಸಾಕ್ಷಿ-1 ರವರಿಗೆ ಕಲ್ಲಿನಿಂದ ಬೆನ್ನಿಗೆ ಮತ್ತು ಕೈಗೆ ಗುದ್ದಿ ಸಾದಾ ಸ್ವರೂಪದ ರಕ್ತಗಾಯ ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.118(1) ಸಹವಾಚಕ ಕಲಂ 190 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6 ನೇ ಆರೋಪಿತರಾದ ನೀವುಗಳು, ಸಾಕ್ಷಿ-1 ರವರಿಗೆ ಲೇ ಸೂಳೆ ಮಗನೆ ನೀನು ನಮ್ಮ ಮೇಲೆ ಕೇಸು ಮಾಡಲು ಹೋಗುತ್ತಿಯನಲೇ ಸೂಳೆ ಮಗನೆ ಅಂತಾ ಅವಾಚ್ಯವಾಗಿ ಬೈದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.352 ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6 ನೇ ಆರೋಪಿತರಾದ ನೀವುಗಳು, ಸಾಕ್ಷಿ-1 ರವರಿಗೆ ಲೇ ಸೂಳೆ ಮಗನೆ ನೀನು ಒಬ್ಬನೇ ಗಂಡು ಮಗ ಇದ್ದೀಯಾ ನಿನ್ನನ್ನು ಹೊಡೆದು ಕಾಲುವೆ ಹಾಕಿದರೆ ಯಾರೂ ಕೂಡ ಕೇಳೋರು ಇಲ್ಲ ಎಂದು ಬೈದಾಡಿ ಆರೋಪಿತರೆಲ್ಲರೂ ಕೂಡಿ ಲೇ ಸೂಳೆ ಮಗನೆ ನೀನು ಇನ್ನೊಂದು ಸಲ ನಮ್ಮ ಹೊಲದಲ್ಲಿ ಬದುವು ಯಾಕೆ ಹೊಡೆದು ಹಾಕುತ್ತಿರಿ ಅಂತಾ ಕೆಳೋಕೆ ಬಂದರೆ ನಿನ್ನನ್ನು ಖಲ್ಲಾಸು ಮಾಡಿ ಅದೇ ಹೊಲದಲ್ಲಿ ಹೂತು ಹಾಕಿ ಹೊಲವನ್ನು ನಾವೇ ಸ್ವಾಧಿನ ಪಡಿಸಿಕೊಳ್ಳುತ್ತೇವೆ ಅಂತಾ ಜೀವದ ಬೇದರಿಕೆ ಹಾಕಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.351(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 26.05.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ,**
**ದೇವದುರ್ಗ.**

**ಸಿ.ಸಿ. ನಂ.525/2025**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿತರುಃ

1. ಮಲ್ಲಪ್ಪ ತಂದೆ ನಾರಾಯಣಿ,
2. ಚಂದ್ರಶೇಖರ ತಂದೆ ಪಂಪಾಪತಿ,
3. ಅಮರೇಶ ತಂದೆ ಮಲ್ಲಪ್ಪ,
4. ವೆಂಕಟೇಶ ತಂದೆ ಮಲ್ಲಪ್ಪ,
5. ಪಂಪಾಪತಿ ತಂದೆ ಮಲ್ಲಪ್ಪ,
6. ರುಕ್ಮವ್ವ ಗಂಡ ಪಂಪಾಪತಿ,

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ–

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ–

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.